ಹೋದ. ಚೆನ್ನಮ್ಮ ಚಹಾ ಸೋಸಿಕೊಂಡು ಮರಿಯಪ್ಪ ಕುಳಿತಿದ್ದ ಪಡಸಾಲೆಗೆ ಬಂದಳು. ಮರಿಯಪ್ಪ ಮುಖ ಕೆಳಗೆ ಇಳಬಿಟ್ಟುಕೊಂಡು ಶೂನ್ಯ ಮನಸ್ಕನಾಗಿ ನೆಲವನ್ನೇ ನೋಡುತ್ತಾ ಕುಳಿತುಕೊಂಡಿದ್ದನ್ನು ಕಂಡು ಚೆನ್ನಮ್ಮನಿಗೆ ಈಗ ಗಂಡನ ಒಳಸಂಕಟ ಏನೆಂಬುದು ಅರ್ಥವಾಯಿತು.

'ಅದ್ಕ್ ಯಾಕ್ ಚಿಂತೀ ಮಾಡ್ತಿ... ನಿನಗ ಒಂದು ವಿಷ್ಯಾ ಹೇಳೂದೈತಿ. ನಿಮಗ ಯಾರಾ ಗೊತ್ತಿರಾರು ಇವತ್ತು ಮನಿಗೆ ಬಂದಿದ್ರು ಜತಿಗೆ ಕರಿಯಪ್ಪನೂ ಬಂದಿದ್ದ. ಅಳವಂಡ್ಯಾರಂತ ಅವ್ರು, ಇವತ್ತು ಮಧ್ಯಾನ ಬಂದಿದ್ರು... ನಿಮ್ಮನ್ನ ಬಾಳ್ ಕೇಳಿದ್ರು... ಎಲ್ಲಾ ಕರಿಯಪ್ಪನೂ ಹೇಳಿ ತಿಳ್ಸಿದ... ನಿಮ್ಮನ್ನ ನಾಳೆ ಬರಾಕ ಹೇಳ್ಯಾರ, ಅಳವಂಡಿಗೆ ಕಳ್ಸಿಕೊಡ್ರಿ ಅಂತಾ ಹೇಳಿದ್ರು' ಎಂದು ಚೆನ್ನಮ್ಮ ಚಹಾ ವಾಟೆಕ್ಕೆ ಹಾಕಿ, ಕೊಡಲು ಮುಂದೆ ಕೈಚಾಚಿದಾಗ ಮರಿಯಪ್ಪ, 'ಯಾರಂತ ಅವ್ರು' ಎನ್ನುತ್ತಾ ಚೆಂಡು ಮೆಲ್ಲನೆ ಎತ್ತಿ ಚಹಾ ವಾಟೆ ಕೈಗೆತ್ತಿಕೊಂಡು ತುಟಿಗಿಟ್ಟುಕೊಂಡ. 'ಯಾರೊ ಮಂಜಪ್ಪನವರಂತ ನಿಮ್ಮ ಜತಿಗೆ ಸಾಲಿ ಓದ್ಯಾರಂತ. ಇವತ್ತು ಹಾದಿ ದುರ್ಗಮ್ಮನಿಗೆ ಕಾಯಿ ಒಡ್ಸಕೊಂಡು ಹೋಗಕ್ಕ ಬಂದಿದ್ರಂತ. ಹಂಗ ಗೆಳ್ಯಾನ ಜೀವ ನೆನ್ಸಿ ಮನಿಗೆ ಬಂದಿದ್ರಂತ' ಎಂದು ತಾನು ವಾಟೆಕ್ಕ ಚಹಾ ಹಾಕ್ಕೊಂಡು ತುಟಿಗಿಟ್ಟಳು ಚೆನ್ನಮ್ಮ.

ಮಂಜಪ್ಪನೋರು ಎಂದ ಕೂಡಲೆ ಮರಿಯಪ್ಪನಿಗೆ ತನ್ನ ಚಡ್ಡಿ ದೋಸ್ತನೆಂದು ಗೊತ್ತಾಯ್ತು. 'ಹೌದು ಅವ್ನು ನಾನು ಚಡ್ಡಿ ದೋಸ್ತ್ರು... ಬಾಳ್ ಒಳ್ಳೆ ಮನ್ಸ್ಯಾ. ಹತ್ತನೇ ಇಯತ್ತಿನ ಮಟ ಕೂಡೆ ಓದಿದ್ವಿ... ನಾನು ಸಾಲಿ ನಿಲ್ಲಿಸಿ ಬಿಟ್ಯಾ, ಅವಾ ಓದಿ ನೌಕರಿ ತಗಂಡ...' ಎಂದು ಮರಿಯಪ್ಪ ಖಾಲಿಯಾದ ವಾಟೆ ಇಟ್ಟು, 'ನಾನು ಕರಿಯನ ತಾಕ ಹೋಗಿ ಬರ್ತೀನಿ' ಎಂದು ಹೊರನಡೆದ.

ಕರಿಯನಲ್ಲಿಗೆ ಹೋಗಿ ರಾತ್ರಿ ಮನೆಗೆ ಬಂದ ಮರಿಯಪ್ಪನ ಮುಖ ಅರಳಿದ್ದು ಕಂಡ ಚೆನ್ನಮ್ಮ ಖುಷಿಯಲ್ಲಿಯೇ ಮಗನಿಗೂ ಗಂಡನಿಗೂ ಊಟಕ್ಕೆ ಇಟ್ಟು ಕೊಟ್ಟು, ತಾನೂ ಊಟ ಮಾಡಿ ಮಲಗಿಕೊಂಡಳು. ಔಟಪ್ಪ ಕೊಟ್ಟ ಟೈಮ್ ನಾಳೆ ಒಂದು ದಿನ ಐತಿ, ಮುಂಜಾನೆ ದೌಡು ಎದ್ದು ಅಳವಂಡಿಗೆ ಹೋಗಿ ಗೆಳ್ಯಾನ ಭೆಟ್ಟಿಯಾಗಿ ಏನಾರಾ ಪರಿಹಾರ ತರಬೇಕೆಂದು ಯೋಚಿಸುತ್ತಾ ನಿದ್ದೆಗೆ ಜಾರಿದ ಮರಿಯಪ್ಪ.

★★★

ಮರಿಯಪ್ಪ ಬೆಳಗ್ಗೆ ಬೇಗ ಎದ್ದು ಜಳಕ ಮಾಡಿ, ಹೆಂಡತಿ ಚೆನ್ನಮ್ಮನಿಗೆ ಹೇಳಿ ಅಳವಂಡಿಗೆ ಹೊರಟೇ ಬಿಟ್ಟ. ಮೂರು ಕಿಲೋಮೀಟರ್ ದೂರದ ಅಳವಂಡಿಗೆ ಅವಸರವಸರವಾಗಿ ಹೆಜ್ಜೆ ಹಾಕಿದ ಮರಿಯಪ್ಪ ಅರ್ಧ ತಾಸಿನಲ್ಲಿ ಅಳವಂಡಿ ಕಂಡ. ಗೆಳೆಯನ ಮನೆ ಬಾಗಿಲಿಗೆ ಹೋಗಿ, 'ಮಂಜಪ್ಪ' ಎಂದು ಕೂಗಿದ. ಮಂಜಪ್ಪನ ಮಡದಿ ಒಳಗಿನಿಂದ ಬಾಗಿಲಿಗೆ ಬಂದಾಗ, 'ಮಂಜಪ್ಪಾರು ಇಲ್ಲನಮ್ಮಾ' ಎಂದು ಕೇಳಿದ. 'ಅವ್ರು ತ್ವಾಟದ ಕಡೆ ಹೋಗ್ಯಾರ್ರಿ ಸಂಜೀಕೆ ಬರ್ತಾರ' ಎಂದು ಮಂಜಪ್ಪನ ಮಡದಿ ಹೇಳಿದಾಗ, 'ಆಯ್ತುಮ್ಮಾ' ಎಂದು ಅಲ್ಲಿಂದ ತೋಟದ ಹೊಲದ ಕಡೆಗೆ ಹೆಜ್ಜೆ ಹಾಕಿದ. ಬೆಳಗ್ಗಿನ ಹೊತ್ತಾದ್ದರಿಂದ ಹೆಜ್ಜೆ ಹಾಕಿದಂತೆಲ್ಲಾ ದಾರಿ ವೇಗವಾಗಿ ಸಾಗತೊಡಗಿತ್ತು. ಗೆಳೆಯನ ತೋಟ ಅಷ್ಟು ದೂರದಲ್ಲಿಯೇ ಹಚ್ಚ ಹಸಿರಿನಿಂದ ಕಂಗೊಳಿಸುತ್ತಿತ್ತು.

ಸುಮಾರು ಇಪ್ಪತ್ತೈದು–ಮೂವತ್ತು ಎಕರೆ ಹೊಲವನ್ನು ಎರಡು ಮೂರು ಕೊಳವೆ ಬಾವಿ ಕೊರೆಸಿ ತೋಟ ಮಾಡಿಕೊಂಡು, ಭೂಮಾತ್ತಾಯಿಗೆ ಹಸಿರು ಉಡಿಸಿ ನಿಲ್ಲಿಸಿದ್ದ. ಭತ್ತ, ಮೆಕ್ಕೆಜೋಳ, ಕಬ್ಬು, ಸಜ್ಜೆ, ಶೇಂಗಾ ಬೆಳೆದಿದ್ದ. ತೋಟದ ಮನೆಯ ಒಂದು ಮಗ್ಗುಲಲ್ಲಿ ದನಕ್ಕೆ ಶೆಡ್ಡು ನಿರ್ಮಿಸಿ ಹತ್ತಾರು ಆಕಳು ಎಮ್ಮೆಗಳನ್ನು ಸಾಕಿದ್ದ. ಆಳುಗಳು ತಮ್ಮತಮ್ಮ ಕೆಲಸದಲ್ಲಿ ತೊಡಗಿದ್ದರು. ಮಂಜಪ್ಪ ತೊಟದ ಮನೆಯ ಮುಂದುಗಡೆ ಹೊರಸು ಹಾಕಿಕೊಂಡು ಕುಳಿತು ಯಾವುದೋ ಪುಸ್ತಕ ನೋಡತೊಡಗಿದ್ದ. ಅಷ್ಟರಲ್ಲಿ ಎದುರಿಗೆ ಊರ ದಿಕ್ಕಿನಿಂದ ಬರುತ್ತಿದ್ದ ಮರಿಯಪ್ಪನನ್ನು ನೋಡಿ ಆಳಿಗೆ ನೀರು ತರಲು